ಕೊರೋನಿಲ್: ಬಾಬಾ ರಾಮದೇವ್ ಮೋಸ ಮಾಡಲು ಹೊರಟಿದ್ದಾರೆಯೆ?

ಪ್ರಸಕ್ತ

ಡಾ.ನಾ.ಸೋಮೇಶ್ವರ
naasomeswara@gmail.com

ಕರೋನಾ ಮಹಾಮಾರಿ ಇಂದಿಗೆ ವಿಶ್ವದಲ್ಲಿ 99,85,508 ಜನರಿಗೆ ಹರಡಿದ್ದು, 4,98,664 ಜನರನ್ನು ಕೊಂದಿದೆ. ಭಾರತದಲ್ಲಿ 5,29,577 ಜನರಿಗೆ ಸೋಂಕು ತಗುಲಿದ್ದು 16,103 ಜನರು ಮರಣ ಹೊಂದಿದ್ದಾರೆ. ಕರ್ನಾಟಕದಲ್ಲಿ 11,923 ಜನರು ಸೋಂಕಿಗೆ ತುತ್ತಾಗಿ, 191 ಜನರು ಸತ್ತಿದ್ದಾರೆ. ಕರೋನಾ ಸೋಂಕು ದಿನೇ ದಿನೇ ಏರುತ್ತಿದೆ. ಇದು ಕಡಿಮೆಯಾಗುವ ಲಕ್ಷಣ ಸದ್ಯಕ್ಕಂತೂ ಇಲ್ಲ.

ಕರೋನಾ ಸೋಂಕನ್ನು ನೂರಕ್ಕೆ ನೂರಷ್ಟು ಗುಣಪಡಿಸಬಲ್ಲ ಪ್ರಮಾಣಬದ್ಧ ಔಷಧವಿಲ್ಲ. ಕರೋನಾ ಸೋಂಕೇ ಅಂಟದಂತೆ ತಡೆಗಟ್ಟಬಲ್ಲ ಲಸಿಕೆಯೂ ಇನ್ನೂ ಮಾರುಕಟ್ಟೆಗೆ ಬಂದಿಲ್ಲ. ಕರೋನಾ ಸೋಂಕು ದೇಶದ ಆರ್ಥಿಕ ವ್ಯವಸ್ಥೆಯನ್ನು ಅಲ್ಲೋಲಕಲ್ಲೋಲ ಮಾಡಿದೆ. ಶ್ರೀಸಾಮಾನ್ಯನ ಬದುಕು ಮೂರಾಬಟ್ಟೆಯಾಗಿದೆ.

ಈ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಬೀಗಮುದ್ರೆಯನ್ನು ಸಡಿಲಿಸಬೇಕಾಗಿ ಬಂದಿತು. ಹೊಟ್ಟೆಪಾಡಿಗಾಗಿ ಅನಿವಾರ್ಯವಾಗಿ ಕೆಲಸಕ್ಕೆ ಹೋಗಲೇಬೇಕಾಯಿತು. ಈ ಹಿನ್ನೆಲೆಯಲ್ಲಿ ಕರೋನಾ ಸೋಂಕು ಅಂಟುವ ಸಾಧ್ಯತೆಯು ಬೀಗಮುದ್ರೆಯ ಕಾಲಕ್ಕಿಂತಲೂ ಈಗ ಅಧಿಕವಾಗಿದೆ. ಅದಕ್ಕೆ ದಿನೇ ದಿನೇ ಹೆಚ್ಚುತ್ತಿರುವ ಸೋಂಕು ಪ್ರಮಾಣವೇ ಸಾಕ್ಷಿಯಾಗಿದೆ. 60 ವರ್ಷ ವಯಸ್ಸಾದವರೂ ಹಾಗೂ ಪೂರ್ವ ಪೀಡಿತ ರಕ್ತದ ಏರೊತ್ತಡ, ಮಧುಮೇಹ ಮುಂತಾದ ಕಾಯಿಲೆ ಇರುವವರು ಅಕಸ್ಮಾತ್ ಕರೋನಾ ಸೋಂಕಿಗೆ ತುತ್ತಾದರೆ, ಅವರು ಸಾಯುವ ಸಾಧ್ಯತೆಯು ಹೆಚ್ಚುತ್ತಿದೆ.

ಆಯುರ್ವೇದ: ಈ ಹಿನ್ನೆಲೆಯಲ್ಲಿ ಬಾಬಾ ರಾಮದೇವ್ ಅವರು ಜೂನ್ 23ರಂದು ತಾವು ಕರೋನಾ ಸೋಂಕನ್ನು ಪೂರ್ಣ ರೂಪದಲ್ಲಿ ಗುಣಪಡಿಸುವ, ಗಿಡ ಮೂಲಿಕೆಗಳ ಔಷಧವನ್ನು ರೂಪಿಸಿರುವುದಾಗಿ ಘೋಷಿಸಿದರು. ಈಗಾಗಲೇ 100 ಜನರ ಮೇಲೆ ಪ್ರಯೋಗ ಮಾಡಿದ್ದು, ಅವರೆಲ್ಲ ನೂರಕ್ಕೆ ನೂರರಷ್ಟು ಗುಣಮುಖರಾಗಿರುವುದಾಗಿಯೂ ಸಾರಿದರು. ಈ ಬಗ್ಗೆ ಸಂಬಂಧಿತ ಸಂಶೋಧನಾ ಪ್ರಬಂಧವನ್ನು ಸದ್ಯದಲ್ಲಿಯೇ ಬಹಿರಂಗ ಪಡಿಸುವುದಾಗಿ ಹೇಳಿದರು. ಆದರೆ ಸಂಶೋಧನಾ ಪ್ರಬಂಧವು ಪ್ರಕಟವಾಗುವ ಮೊದಲೇ, ಸಹ ಆಯುರ್ವೇದ ವೈದ್ಯರಿಂದ ಹೊಸ ಔಷಧದ ಗುಣಪಡಿಸುವ ಸಾಮರ್ಥ್ಯದ ನೈಜತೆಯ ವಿಶ್ಲೇಷಣೆಯಾಗುವ ಮೊದಲೇ, ಅದನ್ನು ಮಾರಾಟ ಮಾಡುವುದಕ್ಕೆ ತರಾತುರಿಯನ್ನು ತೋರಿದರು. ಪತ್ರಕರ್ತರ ಎದುರು ತಾವು ರೂಪಿಸುವ ಹೊಸ ಔಷಧವು ಕರೋನಾ ಸೋಂಕನ್ನು ಗುಣಪಡಿಸುತ್ತದೆ ಎಂದು ಘಂಟಾಘೋಷವಾಗಿ ಸಾರಿದರು.

ಅನುಮತಿ ಅಗತ್ಯ: ಭಾರತದಲ್ಲಿ ಆಯುರ್ವೇದ, ಯೋಗ, ನ್ಯಾಚುರೋಪಥಿ, ಯುನಾನಿ, ಸಿದ್ಧ, ಹೋಮಿಯೋಪಥಿ ವೈದ್ಯಕೀಯ ಪದ್ಧತಿಗಳಿಗೆ ಸಂಬಂಧಿಸಿದ ಹಾಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲು ಒಂದು ಅಧಿಕೃತ ಸಂಸ್ಥೆಯಿದೆ. ಅದುವೇ ಆಯುರ್ವೇದ ವಿಜ್ಞಾನಗಳ ಕೇಂದ್ರ ಸಂಶೋಧನಾ ಮಂಡಳಿ (ಸಿ.ಸಿ.ಆರ್.ಎ.ಎಸ್- ದಿ ಸೆಂಟ್ರಲ್ ಕೌನ್ಸಿಲ್ ಫಾರ್ ರಿಸರ್ಚ್ ಇನ್ ಆಯುರ್ವೇದಿಕ್ ಸೈನ್ಸಸ್). ಇದು ಭಾರತ ಸರಕಾರದ ಆಯುಷ್ ಇಲಾಖೆಯ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಸಂಸ್ಥೆ. ಆಯುರ್ವೇದ ಮತ್ತು ಸಂಬಂಧಿತ ಚಿಕಿತ್ಸಾ ವಿಜ್ಞಾನಗಳಿಗೆ ಸಂಬಂಧಿಸಿದ ಹಾಗೆ ಹೊಸ ಹೊಸ ಔಷಧಗಳ ಸಂಶೋಧನೆ, ಅಭಿವೃದ್ಧಿ, ಸಹಕಾರ, ಶಿಫಾರಸು ಹಾಗೂ ಮಾರಾಟವನ್ನು ಮಾಡಲು ಅನುಮತಿಯನ್ನು ನೀಡುತ್ತದೆ. ಆದರೆ ಹೊಸ ಔಷಧದ ಉಪಯುಕ್ತತೆಯನ್ನು ಸಾಬೀತು ಪಡಿಸಲು ಆಧುನಿಕ ಸಂಶೋಧನಾ ವಿಧಿವಿಧಾನಗಳಿಗೆ ಅನುಗುಣವಾಗಿ ಅಧ್ಯಯನವನ್ನು ನಡೆಸಬೇಕಾಗಿದೆ. ಅದನ್ನು ಪ್ರಕಟಿಸಬೇಕಾಗಿದೆ. ಆನಂತರವೇ ಅದನ್ನು ಮಾರಾಟಕ್ಕೆ ಬಿಡುಗಡೆ ಮಾಡಲು ಅನುಮತಿಯನ್ನು ನೀಡುತ್ತದೆ.

ಭಾರತದಲ್ಲಿ ಆಯುರ್ವೇದ ಮತ್ತು ಇತರ ಔಷಧಗಳನ್ನು ಮಾರಾಟ ಮಾಡಲು ಲೈಸೆನ್ಸ್ ಬೇಕು. ಲೈಸೆನ್ಸ್ ಇಲ್ಲದೇ ಆಯುರ್ವೇದಿಕ್ ಮತ್ತು ಸಹ ಚಿಕಿತ್ಸಾ ಪದ್ಧತಿಗಳ ಔಷಧಗಳನ್ನು ಮಾರಾಟ ಮಾಡುವುದು ಕಾನೂನಿಗೆ ವಿರುದ್ಧವಾಗಿದೆ. ಆಯುರ್ವೇದೀಯ ಮತ್ತು ಇತರ ಔಷಧಗಳನ್ನು ಮಾರಾಟ ಮಾಡಲು ನಾಲ್ಕು ರೀತಿಯ ಲೈಸೆನ್ಸ್ ಪಡೆಯಬೇಕಾಗುತ್ತದೆ.

ಚಿಲ್ಲರೆ ಮಾರಾಟಕ್ಕೆ ಪರವಾನಗಿ (ರೀಟೈಲ್ ಲೈಸೆನ್ಸ್): ಆಯುರ್ವೇದ ಮತ್ತು ಸಹ ವಿಜ್ಞಾನಗಳ ಔಷಧಗಳನ್ನು ಮಾರಾಟ ಮಾಡಲು ಅಂಗಡಿ ತೆರೆಯಲು ಅನುಮತಿಯನ್ನು ನೀಡುವ ಲೈಸೆನ್ಸ್. ರೋಗಿಗಳ ವೈದ್ಯರ ಸಲಹಾ ಚೀಟಿಯನ್ನು ಇಲ್ಲಿ ತೋರಿಸಿ, ಅಗತ್ಯ ಔಷಧಗಳನ್ನು ಕೊಳ್ಳಬಹುದು.

ಸಗಟು ಮಾರಾಟಕ್ಕೆ ಪರವಾನಗಿ (ಹೋಲ್ ಸೇಲ್ ಲೈಸೆನ್ಸ್): ಆಯುರ್ವೇದ ಔಷಧಗಳನ್ನು, ಉತ್ಪಾದಕರಿಂದ ನೇರವಾಗಿ ಸಗಟು ಪ್ರಮಾಣದಲ್ಲಿ ಕೊಂಡು, ಅದನ್ನು ಅಂಗಡಿಗಳಿಗೆ/ವೈದ್ಯರಿಗೆ ಪೂರೈಸುವ ವ್ಯಕ್ತಿ ಅಥವ ಸಂಸ್ಥೆಗೆ ಅಗತ್ಯವಾದ ಲೈಸೆನ್ಸ್.

ಔಷಧ ಉತ್ಪಾದನಾ ಪರವಾನಗಿ (ಮ್ಯಾನುಫ್ಯಾಕ್ಚರಿಂಗ್ ಲೈಸೆನ್ಸ್): ನಿಗದಿತ ವಿಧಿ-ವಿಧಾನಕ್ಕೆ ಅನುಗುಣವಾಗಿ ಆಯುರ್ವೇದ ಔಷಧಗಳನ್ನು ಉತ್ಪಾದಿಸಿ, ಅವನ್ನು ಸಗಟು ಮಾರಾಟಕ್ಕೆ ಬಿಡುಗಡೆ ಮಾಡಲು ಅಗತ್ಯವಾದ ಲೈಸೆನ್ಸ್. ಇದನ್ನು ಒಬ್ಬ ವ್ಯಕ್ತಿ ಪಡೆಯಬಹುದು ಅಥವ ಒಂದು ಸಂಸ್ಥೆಯು ಪಡೆಯಬಹುದು.

ಎರವಲು ಪರವಾನಗಿ (ಲೋನ್ ಲೈಸೆನ್ಸ್): ಒಬ್ಬ ವ್ಯಕ್ತಿ/ಸಂಸ್ಥೆಯು ನಿಗದಿತ ಔಷಧವನ್ನು ಉತ್ಪಾದಿಸಲು ಅಗತ್ಯವಾದ ಪರವಾನಗಿಯನ್ನು ಪಡೆದಿದ್ದಾನೆ ಎಂದು ಭಾವಿಸೋಣ. ಆದರೆ ಆತನ ಬಳಿ ಉತ್ಪಾದನೆಗೆ ಅಗತ್ಯವಾದ ಸ್ಥಳ, ಕಟ್ಟಡ, ಯಂತ್ರಗಳು, ತಜ್ಞರು ಹಾಗೂ ಕಾರ್ಮಿಕರು ಇಲ್ಲದಿರಬಹುದು. ಆಗ ಆತನು ಇಂತಹ ಅನುಕೂಲತೆಗಳನ್ನು ಉಳ್ಳ ಮತ್ತೊಂದು ಸಂಸ್ಥೆಯನ್ನು ಸಂಪರ್ಕಿಸಿ, ಅವರ ಆವರಣದಲ್ಲಿ ಔಷಧಗಳನ್ನು ಔಷಧಗಳನ್ನು ತಯಾರಿಸಬಹುದು.

ಹೀಗೆ ನಮ್ಮ ದೇಶದಲ್ಲಿ ಆಯುರ್ವೇದ ಮತ್ತು ಸಹ ಚಿಕಿತ್ಸಾ ಪದ್ಧತಿಗಳ ಔಷಧಗಳ ನಿರ್ಮಾಣ, ಮಾರಾಟ ಮತ್ತು ಚಿಕಿತ್ಸೆಯಲ್ಲಿ ಬಳಸಲು ಮಾರ್ಗದರ್ಶನಗಳಿವೆ. ಯಾರು ಯಾರೆಂದರೆ ಅವರು ತಯಾರಿಸಿ ಮಾರಾಟ ಮಾಡಲು ಅವಕಾಶವಿಲ್ಲ. ಅದಕ್ಕೆ ಸರಕಾರದ ಖಚಿತ ಕಟ್ಟುಪಾಡುಗಳಿವೆ.

ಬಾಬಾ ರಾಮದೇವ್: ಬಾಬಾ ರಾಮದೇವ್ ಅವರು ಆಯುರ್ವೇದ ಔಷಧಗಳನ್ನು ಉತ್ಪಾದಿಸುವ ಪ್ರಮುಖ ಸಂಸ್ಥೆಯಾದ ಪತಂಜಲಿಯ ಜೊತೆಗೂಡಿ ಕೊರೋನಿಲ್, ಶ್ವಾಸಾರಿ ಮತ್ತು ಅನುತೈಲ ಎನ್ನುವ ಮೂರು ಕರೋನಾ ಸೋಂಕು ತಡೆಯುವ ಔಷಧಿಗಳ ಕಿಟ್ ತಯಾರಿಸಿರುವುದಾಗಿ ಸುದ್ದಿಸಂಸ್ಥೆಗಳೊಡನೆ ಹಂಚಿಕೊಂಡರು. ಈ ಔಷಧಗಳನ್ನು ಮುಂದಿನ ವಾರದಲ್ಲಿ ಆನ್‌ಲೈನ್ ಮತ್ತು ಪತಂಜಲಿಯ ಔಷಧ ಮಳಿಗೆಗಳಲ್ಲಿ ಕೊಳ್ಳಬಹುದು ಎಂದರು. ಈ ಕಿಟ್‌ನಲ್ಲಿ 30 ದಿನಗಳಿಗೆ ಸಾಕಾಗುವಷ್ಟು ಔಷಧವಿರುತ್ತದೆ. ಬೆಲೆ ರೂ.545/- ಎಂದೂ ಪ್ರಕಟಿಸಿರುವರು. ಈ ಔಷಧಗಳನ್ನು ಆನ್-ಲೈನ್ ಮೂಲಕ ಮನೆಗೆ ತರಿಸಿಕೊಳ್ಳಲು ನೆರವಾಗುವ ನೂತನ ಆ್ಯಪ್ ಬಿಡುಗಡೆ ಮಾಡಿದರು. ಕಿಟ್‌ನಲ್ಲಿರುವ ಮೂರು ಔಷಧಗಳ ಲಭ್ಯ ವಿವರಗಳು ಈ ಕೆಳಕಂಡಂತಿವೆ.

1. **ಕೊರೋನಿಲ್:** ಕೊರೋನಿಲ್ ಔಷಧವನ್ನು ಪತಂಜಲಿ ಸಂಶೋಧನಾ ಸಂಸ್ಥೆ ಹಾಗೂ ಜಯಪುರದಲ್ಲಿರುವ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳೆರಡೂ ಜಂಟಿಯಾಗಿ ಅಭಿವೃದ್ಧಿಪಡಿಸಿವೆ. ಈ ಔಷಧ ತಯಾರಿಸಲು ಅಮೃತಬಳ್ಳಿ (ಟೀನೋಸ್ಪೋರ ಕಾರ್ಡಿಫೋಲಿಯ), ತುಳಸಿ (ಆಸಿಮಮ್ ಬೆಸಿಲಿಕಮ್) ಮತ್ತು ಅಶ್ವಗಂಧಗಳನ್ನು (ವಿಟಾನಿಯ ಸಾಮ್ನಿಫೆರ) ಪ್ರಧಾನವಾಗಿ ಉಪಯೋಗಿಸಿದ್ದಾರೆ ಎನ್ನಲಾಗಿದೆ.

ಅಮೃತಬಳ್ಳಿ ಅನಾದಿಕಾಲದಿಂದಲೂ ಆಯುರ್ವೇದದಲ್ಲಿ ಉಪಯೋಗದಲ್ಲಿರುವ ಬಳ್ಳಿ. ಅಮೃತಬಳ್ಳಿಯು ರೋಗರಕ್ಷಣಾ ಸಾಮರ್ಥ್ಯವನ್ನು ವರ್ಧಿಸುತ್ತದೆ. ದೀರ್ಘಕಾಲದ ಜ್ವರವನನು ಗುಣಪಡಿಸುತ್ತದೆ. ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಮಧುಮೇಹವನ್ನು ನಿಯಂತ್ರಿಸುತ್ತದೆ. ಒತ್ತಡ ಮತ್ತು ಆತಂಕಗಳನ್ನು ಹದುಬಸ್ತಿನಲ್ಲಿಡುತ್ತದೆ. ಉಸಿರಾಟದ ಸಮಸ್ಯೆಗಳನ್ನು ನಿವಾರಿಸುತ್ತದೆ. ಕೀಲು ಉರಿಯೂತ (ಆರ್ಥ್ರೈಟಿಸ್) ನಿಯಂತ್ರಿಸಲು ಉಪಯುಕ್ತ. ಅಸ್ತಮ ತೀವ್ರತೆಯನ್ನು ಕಡಿಮೆ ಮಾಡಬಲ್ಲುದು. ದೃಷ್ಟಿಸಾಮರ್ಥ್ಯವನ್ನು ಹೆಚ್ಚಿಸಬಲ್ಲುದು ಹಾಗೂ ಅಕಾಲ ವೃದ್ಧಾಪ್ಯವನ್ನು ತಡೆಗಟ್ಟಬಲ್ಲುದು-ಇದು ಆಯುರ್ವೇದ ಗ್ರಂಥಗಳಲ್ಲಿ ದೊರೆಯುವ ಅಮೃತಬಳ್ಳಿಯ ವಿವರಣೆ.

ತುಳಸಿಯನ್ನು ಭಾರತೀಯರು ಗೃಹ ವೈದ್ಯಕೀಯದಲ್ಲಿ ಬಳಸುವುದು ಎಲ್ಲರಿಗೂ ತಿಳಿದ ವಿಚಾರ. ತುಳಸಿಯು ಪ್ರತಿ ಉತ್ಕರ್ಷಕ (ಆಂಟಿ ಆಕ್ಸಿಡಂಟ್). ಎಂದರೆ ಮಧುಮೇಹ, ಹೃದ್ರೋಗ, ಕ್ಯಾನ್ಸರ್ ಮುಂತಾದ ಅನಾರೋಗ್ಯಗಳು ತಲೆದೋರಲು ಕಾರಣವಾಗುವ ರಾಸಾಯನಿಗಳನ್ನು ನಿಗ್ರಹಿಸಬಲ್ಲುದು. ಯಕೃತ್ ಆರೋಗ್ಯವನ್ನು ಸುಧಾರಿಸಬಲ್ಲುದು. ಅಕಾಲ ವೃದ್ಧಾಪ್ಯವನ್ನು ತಡೆಗಟ್ಟಬಲ್ಲುದು. ಮಧುಮೇಹವನ್ನು ನಿಯಂತ್ರಿಸಬಲ್ಲುದು. ಉರಿಯೂತವನ್ನು ಕಡಿಮೆ ಮಾಡಬಲ್ಲುದು ಹಾಗೂ ಸೋಂಕನ್ನು ತಡೆಗಟ್ಟಬಲ್ಲುದು.

ಅಶ್ವಗಂಧವೂ ಸಹ ಚಿರಪರಿಚಿತವಾದ ಬೇರು. ರಕ್ತಸಕ್ಕರೆ ನಿಯಂತ್ರಕ. ಒತ್ತಡ ಮತ್ತು ಆತಂಕವನ್ನು ನಿಗ್ರಹಿಸಲು ನೆರವಾಗಬಹುದು. ಪುರುಷರಲ್ಲಿ ಟೆಸ್ಟೋಸ್ಟಿರೋನ್ ಹಾರ್ಮೋನನ್ನು ಹೆಚ್ಚಿಸುವ ಕಾರಣ, ಅವರ ಸಂತಾನವರ್ಧನಾ ಸಾಮರ್ಥ್ಯವನ್ನು ಅಧಿಕಗೊಳಿಸಬಹುದು. ಸ್ನಾಯುಗಳ ಬಲವರ್ಧನೆಯನ್ನು ಹೆಚ್ಚಿಸಿ ಕಾರ್ಯಕ್ಷಮತೆಯನ್ನು ಉತ್ತಮಗೊಳಿಸಬಹುದು. ಉರಿಯೂತವನ್ನು ಕಡಿಮೆ ಮಾಡಬಹುದು.

2. **ಶ್ವಾಸಾರಿ:** ಇದು ಕಿಟ್‌ನಲ್ಲಿರುವ ಎರಡನೆಯ ಔಷಧ. ಇದರ ಮೂಲಿಕಾ ಸಂಯೋಜನೆಯ ಬಗ್ಗೆ ಮಾಹಿತಿಯಿಲ್ಲ. ಇದು ವ್ಯಕ್ತಿಯ ಶ್ವಾಸಕೋಶಗಳ ಸಾಮರ್ಥ್ಯವನ್ನು ಬಲಪಡಿಸುತ್ತದೆ ಎನ್ನಲಾಗಿದೆ. ಕರೋನಾ ಸೋಂಕಿನಲ್ಲಿ ಪ್ರಧಾನವಾಗಿ ಕಂಡುಬರುವ ಜ್ವರ, ಕೆಮ್ಮು ಮತ್ತು ನೆಗಡಿಯನ್ನು ಗುಣಪಡಿಸುತ್ತದೆ ಎನ್ನಲಾಗಿದೆ.

3. **ಅನುತೈಲ:** ಜೀವಂತಿ, ದೇವದಾರು, ಶ್ವೇತ ಚಂದನ, ದಾರುಹರಿದ್ರಾ, ಜ್ಯೇಷ್ಠಮಧು, ಶತಾವರಿ, ಅಗರು, ಶ್ವೇತಕಮಲ ಮತ್ತು ನೀಲಕಮಲ ಮುಂತಾದ 12 ಮೂಲಿಕೆಗಳಿಂದಾದ ತೈಲ. ಇದನ್ನು ಮೂಗಿನ ಎರಡು ಹೊರಳೆಗಳಲ್ಲಿ 2-3 ಹನಿಗಳನ್ನು ಹಾಕಬೇಕಾಗುತ್ತದೆ. ಅನುತೈಲವು ಪ್ರಧಾನವಾಗಿ ಪಂಚೇಂದ್ರಿಯಗಳ ಸಾಮರ್ಥ್ಯವನ್ನು ಚುರುಕುಗೊಳಿಸುತ್ತದೆ. ತಲೆನೋವು, ಸೈನಸ್ ತೊಂದರೆ, ಮೈಗ್ರೇನ್, ಅಲರ್ಜಿಕ್ ರೈನೈಟಿಸ್ ಹಾಗೂ ಕೂದಲುದುರುವುದನ್ನು ತಡೆಗಟ್ಟಲು ಬಳಸುವರು. ಬಹುಶಃ ಮೂಗಿನಲ್ಲಿ ಕರೋನಾ ವೈರಸ್ ಬೀಡು ಬಿಡದಂತೆ ಹಾಗೂ ವರ್ಧಿಸದಂತೆ ತಡೆಗಟ್ಟುತ್ತಿರಬಹುದು. ಆದರೆ ಇದಕ್ಕೆ ಸೂಕ್ತ ಪುರಾವೆಯು ಬೇಕಿದೆ.

ಕೊರೋನಿಲ್ ಕಿಟ್ ಔಷಧಗಳನ್ನು ಪತಂಜಲಿ ಸಂಶೋಧನಾ ಸಂಸ್ಥೆ ಹಾಗೂ ಜಯಪುರದಲ್ಲಿರುವ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳೆರಡೂ ಜಂಟಿಯಾಗಿ ಅಭಿವೃದ್ಧಿಪಡಿಸಿದ್ದರೂ, ಈ ಔಷಧಗಳ ಉತ್ಪಾದನೆಯನ್ನು ಹರಿದ್ವಾರದಲ್ಲಿರುವ ದಿವ್ಯಾ ಫಾರ್ಮಸಿ ಮತ್ತು ಪತಂಜಲಿ ಆಯುರ್ವೇದ ಲಿಮಿಟೆಡ್ ಸಂಸ್ಥೆಗಳು ಮಾಡುತ್ತಿವೆ.

ಎಫ್.ಐ.ಆರ್: ಬಾಬಾ ರಾಮದೇವ್ ಅವರು- ಕೊರೋನಿಲ್ ಕಿಟ್ ಔಷಧಗಳ ನೆರವಿನಿಂದ ಕರೋನಾ ಸೋಂಕನ್ನು ಗುಣಪಡಿಸಲು ಸಾಧ್ಯ-ಎಂದು ಹೇಳಿರುವುದರ ವಿರುದ್ಧ ಶುಕ್ರವಾರ, 26.06.2020ರಂದು ಒಂದು ಎಫ್.ಐ.ಆರ್ ದಾಖಲಾಗಿದೆ. ಜಯಪುರದ ಜ್ಯೋತಿನಗರ ಪೊಲೀಸ್ ಠಾಣೆಯಲ್ಲಿ ಬಲರಾಮ್ ಜಾಖಡ್ ಎನ್ನುವವರು ಎಫ್.ಐ.ಆರ್ ದಾಖಲಿಸಿರುವರು.

ಯೋಗ ಗುರು ರಾಮದೇವ್, ಪತಂಜಲಿ ಸಿಇಒ ಆಚಾರ್ಯ ಬಾಲಕೃಷ್ಣ, ವಿಜ್ಞಾನಿ ಅನುರಾಗ್ ವಾರ್ಷ್ಣೆ, ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಚೇರ್ಮನ್ ಡಾ. ಬಲಬೀರ್ ಸಿಂಗ್ ತೋಮರ್ ಮತ್ತು ನಿರ್ದೇಶಕರಾದ ಡಾ.ಅನುರಾಗ್ ತೋಮರ್ – ಈ ಐವರ ಮೇಲೆ ಎಫ್.ಐ.ಆರ್.ದಾಖಲಾಗಿದೆ. ಆರೋಪವೇನೆಂದರೆ ಕೊರೋನಿಲ್ ಕಿಟ್ ಕರೋನಾ ಸೋಂಕನ್ನು ಗುಣಪಡಿಸುತ್ತದೆ ಎನ್ನುವ ಹಸಿ ಹಸಿ ಸುಳ್ಳು. ಒಂದು ಸುಳ್ಳಿನ ಮೂಲಕ ಜನಸಾಮಾನ್ಯರಿಗೆ ಮಾಡುತ್ತಿರುವ ಹಗಲು ಮೋಸ. ಈ ಐವರನ್ನು ಐಪಿಸಿ ಸೆಕ್ಷನ್ 420 (ಚೀಟಿಂಗ್) ರ ಅನ್ವಯ ಬಂಧಿಸಬೇಕು ಹಾಗೂ ಕೊರೋನಿಲ್ ಮಾರಾಟವನ್ನು ತಡೆಗಟ್ಟಬೇಕು ಎನ್ನುವುದು ಎಫ್.ಐ.ಆರ್‌ನ ಸಾರಾಂಶ. ಹಾಗೆಯೇ ಬಿಹಾರದ ನ್ಯಾಯಾಲಯದಲ್ಲಿ ಬಾಬಾ ರಾಮದೇವ್ ಹಾಗೂ ಆಚಾರ್ಯ ಬಾಲಕೃಷ್ಣರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ. ಕರೋನಾ ಸೋಂಕನ್ನು ಗುಣಪಡಿಸುತ್ತದೆ ಎಂದು ಲಕ್ಷಾಂತರ ಜನರಿಗೆ ಮೋಸ ಮಾಡುತ್ತಿದ್ದಾರೆ ಹಾಗೂ ಅವರ ಆರೋಗ್ಯದೊಡನೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಬಿಹಾರದ ಮುಖ್ಯ ಜುಡೀಷಿಯಲ್ ಮ್ಯಾಜಿಸ್ಟ್ರೇಟ್ ಮುಖೇಶ್ ಕುಮಾರ್ ಅವರ ಬಳಿ ತಮನ್ನಾ ಹಷ್ಮಿ ಎನ್ನುವವರು ಕೇಸ್ ದಾಖಲಿಸಿದ್ದಾರೆ. ಐಪಿಸಿ ಸೆಕ್ಷನ್ 420 (ಚೀಟಿಂಗ್), 120 (ಬಿ) (ಕ್ರಿಮಿನಲ್ ಕಾನ್ಸ್‌ಪೈರಸಿ) ಮತ್ತು 220 (ಮ್ಯಾಲಿಗ್ನಂಟ್ ಆಕ್ಟ್ ಲೈಕ್ಲಿ ಟು ಸ್ಪ್ರೆಡ್ ಇನ್‌ಫೆಕ್ಷನ್ ಆಫ್ ಡಿಸೀಸ್ ಡೇಂಜರಸ್ ಟು ಲೈಫ್) ಈ ಮೂರು ಕಾನೂನುಗಳ ವ್ಯಾಪ್ತಿಯಲ್ಲಿ ಕ್ರಮವನ್ನು ಕೈಗೊಳ್ಳುವಂತೆ ನ್ಯಾಯಾಲಯವನ್ನು ಆಗ್ರಹಿಸಿದ್ದಾರೆ. ಹಿಯರಿಂಗ್ ಇದೇ ತಿಂಗಳು 30ರಂದು ನಡೆಯಲಿದೆ.

ಅನುಮತಿ: ಡಾ.ಬಲಬೀರ್ ಸಿಂಗ್ ಅವರು ಜನರಿಗೆ ನಾವು ಮೋಸಮಾಡುತ್ತಿಲ್ಲ ಎಂದು ಹೇಳಿಕೆ ನೀಡಿದ್ದಾರೆ. ನಾವು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್=ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್) ಅಂಗಸಂಸ್ಥೆಯಾದ ಭಾರತೀಯ ಔಷಧ ಪ್ರಯೋಗ ನೋಂದಾವಣಿ (ಸಿಟಿಆರ್ಐ=ಕ್ಲಿನಿಕಲ್ ಟ್ರಯಲ್ಸ್ ರೆಜಿಸ್ಟ್ರಿ-ಇಂಡಿಯ) ಸಂಸ್ಥೆಯೊಡನೆ ಅಗತ್ಯ ಅಧ್ಯಯನಕ್ಕೆ ಅಗತ್ಯವಾದ ನೋಂದಣಿಯನ್ನು ಮಾಡಿಸಿದ್ದೇವೆ. ಮಾಡಿಸಿರುವುದಕ್ಕೆ ಪುರಾವೆಯಾಗಿ ಸಂಬಂಧಪಟ್ಟ ದಾಖಲೆಗಳು ನಮ್ಮಲ್ಲಿವೆ ಎಂದಿದ್ದಾರೆ. ಪ್ರಯೋಗಾಧ್ಯಯನವನ್ನು ಜಯಪುರದ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನಡೆಸಲಾಗಿದೆ. ಪ್ರಯೋಗದಲ್ಲಿ ಒಟ್ಟು 100 ಜನರನ್ನು ಆಯ್ಕೆ ಮಾಡಿಕೊಂಡೆವು. 69ರಷ್ಟು ಜನರ ಕರೋನಾ ಸೋಂಕು 3 ದಿನಗಳಲ್ಲಿ ಗುಣವಾಯಿತು. ಉಳಿದವರು ಒಂದು ವಾರದಲ್ಲಿ ಗುಣಮುಖರಾದರು ಎಂದು ಹೇಳಿಕೆ ನೀಡಿದ್ದಾರೆ. ಕೊರೋನಿಲ್ ಕರೋನಾ ಸೋಂಕನ್ನು ಗುಣಪಡಿಸುವ ಔಷಧವೇ ಅಥವ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಔಷಧವೇ ಎಂದು ಪ್ರಶ್ನೆಯನ್ನು ಕೇಳಿದಾಗ, ಈ ಪ್ರಶ್ನೆಗೆ ಪತಂಜಲಿ ಸಂಸ್ಥೆಯವರು ಉತ್ತರವನ್ನು ಕೊಡಬೇಕು ಎಂದಿದ್ದಾರೆ. ತಾವು ತಮ್ಮ ಅಧ್ಯಯನದ ವರದಿಯನ್ನು ಜೂನ್ 2ರಂದು ಜೂನ್ 2ರಂದು ರಾಜಸ್ಥಾನ್ ಆರೋಗ್ಯ ಇಲಾಖೆಗೆ ಸಲ್ಲಿಸಿರುವಾಗಿಯೂ ಹೇಳಿದ್ದಾರೆ.

ನಿರ್ಬಂಧ: ಕೊರೋನಿಲ್ ಬಗ್ಗೆ ಮಾಧ್ಯಮದಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬಿಸಿ ಬಿಸಿ ಚರ್ಚೆಯು ಆರಂಭವಾಗುತ್ತಿರುವಂತೆಯೇ ಭಾರತ ಸರಕಾರದ ಆಯುಷ್ ಇಲಾಖೆಯು, ರಾಮದೇವ್ ಅವರ ಪತಂಜಲಿ ಆಯುರ್ವೇದ ಲಿಮಿಟೆಡ್ ಸಂಸ್ಥೆಗೆ ನಿರ್ಬಂಧವನ್ನು ಹೇರಿದೆ. ಕ್ರಮಬದ್ಧ ಅಧ್ಯಯನವು ನಡೆದು ತಮ್ಮ ಹೇಳಿಕೆಗೆ ಸೂಕ್ತ ಪುರಾವೆಯು ದೊರೆಯುವವರಿಗೂ ತಾವು ಕೊರೋನಿಲ್ ಔಷಧದ ಪ್ರಚಾರ ಹಾಗೂ ಕರೋನಾ ಸೋಂಕನ್ನು ಗುಣಪಡಿಸುತ್ತದೆ ಎನ್ನುವ ಹೇಳಿಕೆಯನ್ನು ನಿಲ್ಲಿಸಬೇಕು ಎಂದು ಆಜ್ಞೆಯನ್ನು ಮಾಡಿದೆ. ಈಗಾಗಲೇ ನಡೆದಿರುವ ಎಲ್ಲ ಅಧ್ಯಯನ ಸಂಬಂಧಿತ ದಾಖಲೆಗಳನ್ನು ಆಯುಷ್ ಇಲಾಖೆಗೆ ಸಲ್ಲಿಸಬೇಕು ಎಂದು ತಾಕೀತು ಮಾಡಿದೆ. ಜತೆಗೆ ಆಯುಷ್ ಇಲಾಖೆಯು ಉತ್ತರಾಖಂಡ್ ರಾಜ್ಯಸರಕಾರವು ಪತಂಜಲಿ ಸಂಸ್ಥೆಗೆ ನೀಡಿರುವ ಪರವಾನಗಿಯ ವಿವರಗಳನ್ನೂ ಕಳುಹಿಸಿಕೊಡುವಂತೆ ಹೇಳಿದೆ. ಬಾಬಾ ರಾಮದೇವ್ ಅವರು ತಮ್ಮ ಔಷಧ ಕರೋನಾ ಸೋಂಕನ್ನು ಖಂಡಿತ ಗುಣಪಡಿಸುವುದಾಗಿಯೂ, ಕೊರೋನಿಲ್ ಸಂಶೋಧನೆಯಲ್ಲಿ ಯಾವುದೇ ತಪ್ಪನ್ನು ಮಾಡಿಲ್ಲವೆಂದು ಹೇಳಿಕೆಯನ್ನು ನೀಡಿರುವುದು ಕುತೂಹಲಕರವಾಗಿದೆ.

ಎರಡು ಬಣ: ಭಾರತೀಯ ಶ್ರೀಸಾಮಾನ್ಯರಲ್ಲಿ ಎರಡು ಬಣಗಳಿವೆ. ಮೊದಲನೆಯ ಬಣದವರು, ಆಯುರ್ವೇದವು ಸಾವಿರಾರು ವರ್ಷಗಳಿಂದ ಅಸ್ತಿತ್ವದಲ್ಲಿರುವ ವಿಜ್ಞಾನ, ಆಯಸ್ಸನ್ನು ಹೆಚ್ಚಿಸುವ ವೈದ್ಯಕೀಯ, ಆಯುರ್ವೇದದ ಮೂಲಕ ಎಲ್ಲ ರೋಗಗಳನ್ನೂ ಗುಣಪಡಿಸಬಹುದು ಎಂದು ನಂಬುವ ಜನ. ಆಯುರ್ವೇದವು ಸತ್ತವರನ್ನೂ ಬದುಕಿಸಬಲ್ಲುದು ಎನ್ನುವುದು ಇವರ ದೃಢವಾದ ನಂಬಿಕೆ. ಎರಡನೆಯ ಗುಂಪಿನವರು, ಆಯುರ್ವೇದವು ಅಜ್ಜಿ ಗೃಹವೈದ್ಯಕ್ಕಿಂತ ಅಷ್ಟು ಭಿನ್ನವಾಗೇನೋ ಇಲ್ಲ, ಆಧುನಿಕ ವೈದ್ಯಕೀಯದ ಕ್ರಮಬದ್ಧ ಶಿಸ್ತಿನ ಅಧ್ಯಯನವಿಲ್ಲದ ಅವೈಜ್ಞಾನಿಕ ಚಿಕಿತ್ಸಾ ಕ್ರಮ. ಭಾರಲೋಹಗಳು (ಹೆವಿ ಮೆಟಲ್ಸ್) ಮೂತ್ರಪಿಂಡಗಳಿಗೆ ಮಾಡಬಹುದಾದ ಹಾನಿಯ ಅರಿವಿಲ್ಲದೆಯೇ ಅವನ್ನು ಬಳಸುವ ಕಚ್ಚಾ ವೈದ್ಯಕೀಯ. ಆಯುರ್ವೇದ ಔಷಧಗಳ ಡೋಸ್ ಪ್ರಮಾಣಬದ್ಧವಲ್ಲ, ಅವುಗಳ ಪರಿಣಾಮದ ಬಗ್ಗೆ ಕ್ರಮಬದ್ಧ ಅಧ್ಯಯನಗಳು ನಡೆದಿಲ್ಲ. ಇನ್ನು ಪಾರ್ಶ್ವಪರಿಣಾಮಗಳ (ಸೈಡ್ ಎಫೆಕ್ಟ್ಸ್) ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ. ಆಯುರ್ವೇದ ಔಷಧಗಳ ತಯಾರಿಕೆಯಲ್ಲಿ ಗುಣಮಟ್ಟವನ್ನು ಕಾದಿರಿಸುವ (ಕ್ವಾಲಿಟಿ ಕಂಟ್ರೋಲ್) ಪ್ರಮಾಣಬದ್ಧ ಮಾರ್ಗದರ್ಶನವಿಲ್ಲ. ಹಾಗಾಗಿ ವಾಸ್ತವದಲ್ಲಿ ಆಯುರ್ವೇದವು ಅಂತಹ ಶ್ರೇಷ್ಠವೇನಲ್ಲ ಎನ್ನುವುದು ಎರಡನೆಯ ಗುಂಪಿನವರ ಅನಿಸಿಕೆ. ಆದರೆ ಕಟು ವಾಸ್ತವವು ಇವೆರಡರ ನಡುವೆ ಎಲ್ಲೋ ಇರುತ್ತದೆ ಎನ್ನುವುದನ್ನು ಎರಡೂ ಬಣದವರು ಒಪ್ಪದಿರುವುದು ವಿಷಧನೀಯ.

ಆಯುರ್ವೇದ ಪ್ರಿಯರು ಪ್ರಮುಖ ವಾದವೆಂದರೆ, ಸರ್ಕಾರವು ಆಯುರ್ವೇದ ವಿಷಯದಲ್ಲಿ ಮಲತಾಯಿ ಧೋರಣೆಯನ್ನು ತೋರುತ್ತಿದೆ ಎನ್ನುವುದು. ಫಾವಿಪಿರಾವಿರ್ ಎನ್ನುವ ಆಧುನಿಕ ವೈದ್ಯಕೀಯ ಔಷಧವನ್ನು ಕೇವಲ 150 ಜನರ ಮೇಲೆ ಪ್ರಯೋಗಿಸಿ ಅಧ್ಯಯನವನ್ನು ಮಾಡಿದರು. ಅದನ್ನು ಕೊರೋನ ಸೋಂಕಿತರ ಮೇಲೆ ಪ್ರಯೋಗಿಸಲು ಸರ್ಕಾರವು ಅನುಮತಿಯನ್ನು ನೀಡಿದರು. ಕೊರೋನಿಲ್ ಔಷಧವನ್ನು 100 ಜನರ ಮೇಲೆ ಅಧ್ಯಯನವನ್ನು ಮಾಡಿದ್ದರೂ ಸಹ, ಸರ್ಕಾರವು ಕೊರೋನಿಲ್ ಔಷಧವನ್ನು ಮಾರಾಟಕ್ಕೆ ಬಿಡುಗಡೆ ಮಾಡಿಲ್ಲ. ಇದು ತಪ್ಪು. 150-100ರ ಸಂಖ್ಯೆಯ ನಡುವೆ ಅಂತಹ ವ್ಯತ್ಯಾಸವೇನೂ ಇಲ್ಲ ಎನ್ನುವುದು ಅವರ ವಾದದ ತಿರುಳು.

ಫಾವಿಪಿರಾವಿರ್: ಫಾವಿಪಿರಾವಿರ್ ಹೊಸ ಔಷಧವಲ್ಲ. ಕೊರೋನಿಲ್ ಹೊಸ ಔಷಧ. ಫಾವಿಪಿರಾವಿರ್ ವೈರಸ್ ರೋಧಕ ಔಷಧವನ್ನು 2014ರಲ್ಲಿ ಜಪಾನಿನ ಟೊಯೋಮ ಕೆಮಿಕಲ್ಸ್ ಎನ್ನುವ ಸಂಸ್ಥೆಯು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿತು. 2016ರಲ್ಲಿ ಚೀನಾದ ಝೇಜಿಯಾಂಗ್ ಹಿಸೂನ್ ಫಾರ್ಮಸ್ಯೂಟಿಕಲ್ ಕಂಪನಿಯು ಇದನ್ನು ಸಗಟು ಪ್ರಮಾಣದಲ್ಲಿ (ಬಲ್ಕ್ ಡ್ರಗ್) ಉತ್ಪಾದಿಸಿತು. 2019ರಿಂದ ಜೆನೆರಿಕ್ ಡ್ರಗ್ ಆಗಿ ಮಾರಾಟ ಮಾಡಲಾರಂಭಿಸಿತು. ಜಪಾನಿನಲ್ಲಿ ಇನ್‌ಫ್ಲುಯೆಂಜಾ ಚಿಕಿತ್ಸೆಯಲ್ಲಿ ಫಾವಿಪಿರಾವಿರ್ ವೈರಸ್ ರೋಧಕ ಔಷಧವನ್ನು ಬಳಸಲು ಅಧಿಕೃತ ಪರವಾನಗಿಯು ಇದೆ. ಮಾರ್ಚ್ 15, 2020ರಿಂದ ಚೀನಾದಲ್ಲಿ ಫಾವಿಪಿರಾವಿರ್ ಔಷಧವನ್ನು ಕೋವಿಡ್-19 ಸೋಂಕನ್ನು ಗುಣಪಡಿಸಲು ನೀಡಲಾಗುತ್ತಿದೆ. ಜೂನ್ 20ರಂದು ಭಾರತ ಸರಕಾರವು ಗ್ಲೆನ್ ಮಾರ್ಕ್ ಸಂಸ್ಥೆಗೆ ಫಾವಿಪಿರಾವಿರ್ ಉತ್ಪಾದನೆ ಹಾಗೂ ಮಾರಾಟಕ್ಕೆ ಅನುಮತಿಯನ್ನು ನೀಡಿದೆ. ಗ್ಲೆನ್‌ಮಾರ್ಕ್ ಸಂಸ್ಥೆಯು 150 ಭಾರತೀಯರ ಅಧ್ಯಯನವನ್ನು ಮಾಡಿದೆ. ಅದರ ವರದಿಯನ್ನಾಧರಿಸಿ ಫಾವಿಪಿರಾವಿರ್ ವೈರಸ್ ರೋಧಕ ಔಷಧವನ್ನು ಕೋವಿಡ್-19 ತುರ್ತು ಚಿಕಿತ್ಸಾ ಔಷಧ ಮಾತ್ರ ಎಂದು ಘೋಷಿಸಿ ಸೀಮಿತ ಮಾರಾಟಕ್ಕೆ ಮಾತ್ರ ಬಿಡುಗಡೆ ಮಾಡಿದೆ. (ಜಪಾನ್, ಚೀನಾಗಳಲ್ಲದೆ ಲಂಡನ್, ಅಮೆರಿಕಗಳಲ್ಲೂ ಅಧ್ಯಯನಗಳು ನಡೆದು ಉಪಯುಕ್ತತೆ-ಸುರಕ್ಷತೆಯ ಬಗ್ಗೆ ವಿಪುಲ ಮಾಹಿತಿಯಿದೆ) ಫಾವಿಪಿರಾವಿರ್ ಔಷಧವನ್ನು ಯಾರೆಂದರೆ ಅವರು ಕೊಳ್ಳುವ ಹಾಗಿಲ್ಲ. ವೈದ್ಯರ ಸಲಹಾ ಚೀಟಿ ಅಗತ್ಯ. ವೈದ್ಯರು ಫಾವಿಪಿರಾವಿರ್ ಔಷಧವನ್ನು ಪೂರ್ವ ಪೀಡಿತ ರೋಗಗಳಿದ್ದವರಿಗೆ-ಅಂದರೆ ರಕ್ತದ ಏರೊತ್ತಡ, ಮಧುಮೇಹ, ಕ್ಯಾನ್ಸರ್ ಇತ್ಯಾದಿ-ಕೊಡುವ ಹಾಗಿಲ್ಲ ಎನ್ನುತ್ತದೆ. ಏಕೆಂದರೆ ಪಾವಿಪಿರಾವಿರ್ ಅಂತಹವರಲ್ಲಿ ಮೂತ್ರಪಿಂಡ ವೈಫಲ್ಯ ಹಾಗೂ ಸಾವಿಗೆ ಕಾರಣವಾಗಬಹುದು. ಹಾಗೆಯೇ ಗರ್ಭವತಿಯರಿಗೆ, ಹಾಲೂಡಿಸುವ ತಾಯಂದಿರಿಗೆ ಹಾಗೂ ಮಕ್ಕಳಿಗೆ ಈ ಔಷಧವನ್ನು ನೀಡುವ ಹಾಗಿಲ್ಲ. ಫಾವಿಪಿರಾವಿರ್ ಜನ್ಮದತ್ತವೈಕಲ್ಯಗಳನ್ನು ಉಂಟುಮಾಡಬಲ್ಲುದು. ಫಾವಿಪಿರಾವಿರ್

ಔಷಧವನ್ನು ಐಸಿಯುನಲ್ಲಿ ಅಂತಿಮ ಘಟ್ಟದಲ್ಲಿರುವವರಿಗೆ ಇದನ್ನು ನೀಡುವಂತಿಲ್ಲ. ಹೀಗೆ ಹಲವು ಹತ್ತು ವಿಧಿ ನಿಷೇಧಗಳ ಜತೆಯಲ್ಲಿ ಫಾವಿಪಿರಾವಿರ್ ಔಷಧವನ್ನು ಮಾರಾಟಕ್ಕೆ ಬಿಡುಗಡೆ ಮಾಡಲಾಗಿದೆ.

ಶರವೇಗದ ಕರೋನಾ ತಡೆಗೆ ಮುಂಜಾಗ್ರತೆಯೊಂದೆ ಮದ್ದು

ಅಭಿಮತ

ಅನಿತಾ ಆರ್ ಪಾಟೇಲ್
anithapatil06@gmail.com

ದೇಶದಲ್ಲಿ ಮಹಾಮಾರಿ ಕರೋನಾ ವೈರಸ್ ಶರವೇಗದಲ್ಲಿ ಜನಸಾಮಾನ್ಯರಿಗೆ ವಕ್ಕರಿಸಿ, ಹಿಂಡಿ ಹಿಪ್ಪೆ ಮಾಡುತ್ತಿದೆ. ಲಾಕ್ ಡೌನ್ ಸಂದರ್ಭದಲ್ಲಿ ಕರೋನಾ ಸ್ಫೋಟಕ್ಕಿಂತಲೂ ಈಗಿನ ಸ್ಫೋಟ ಭಯಾನಕವಾಗಿದೆ. ನಿತ್ಯ ಬರುತ್ತಿರುವ ಹೆಲ್ತ್ ಬುಲೆಟಿನ್‌ನ ಸೋಂಕಿತರ ಪಟ್ಟಿ ನೋಡಿ ಸರಕಾರ, ಆರೋಗ್ಯ ಇಲಾಖೆ, ಜನತೆ ದಂಗಾಗಿ ಹೋಗಿದ್ದಾರೆ. ರಾಜ್ಯದಲ್ಲಿ ಆರಂಭದಲ್ಲಿ ಎರಡಂಕಿಯಲ್ಲಿ ಬರುತ್ತಿದ್ದ ಕರೋನಾ ಸೋಂಕಿತರ ಸಂಖ್ಯೆ ಇದೀಗ ಸಾವಿರ ಲೆಕ್ಕ ದಾಟಿದೆ. ಜತೆಗೆ ಸಾವಿನ ಸಂಖ್ಯೆ ಹೆಚ್ಚುತ್ತಿದೆ. ಒಂದೆಡೆ ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಗಗನಕ್ಕೇರುತ್ತಿದೆ. ಇನ್ನೊಂದೆಡೆ ಗುಣಮುಖರಾಗಿ, ಡಿಸ್ಚಾರ್ಜ್ ಆಗುತ್ತಿರುವ ಸೋಂಕಿತರ ಸಂಖ್ಯೆ ಕಡಿಮೆಯಿದೆ. ಹೀಗಾಗಿ ಬಹುದೊಡ್ಡ ಸವಾಲು ಎದುರಾಗಿದೆ. ಕರೋನಾ ತಡೆಗೆ ಲಾಕ್ ಡೌನ್ ಒಂದೇ ಪರಿಹಾರನಾ, ಮತ್ತೆ ಬೇರೆಯೇನಾದರೂ ಇದ್ಯಾ, ಇನ್ನೊಂದೆಡೆ ಕಿಲ್ಲರ್ ಕರೋನಾಗೆ ಮದ್ದು ಕಂಡುಬರುತ್ತಿಲ್ಲ. ಕರೋನಾಗೆ ಸಿಕ್ಕಿದೆ ಔಷಧಿ ಎನ್ನುವ ಸುದ್ದಿಗಳು ಹರಿದಾಡುತ್ತಿವೆ. ಆದರೆ ಇನ್ನೂ ಅಧಿಕೃತವಾಗಿ ಔಷಧ ಕಂಡು ಬಂದಿಲ್ಲ. ಕರೋನಾ ವೈರಸ್ ವೈದ್ಯಕೀಯ ಲೋಕಕ್ಕೆ ಸವಾಲಾಗಿ, ಜನ ಸಾಮಾನ್ಯರ ಬದುಕು ಕಸಿದುಕೊಂಡಿದೆ. ನಾಲ್ಕು ಹಂತದ ಲಾಕ್ ಡೌನ್ ಬಳಿಕ ದೇಶವ್ಯಾಪಿ ಸಡಿಲಿಕೆ ಮಾಡಲಾಗಿತ್ತು.

ಜನಸಾಮಾನ್ಯರು ಅಗತ್ಯ ಮುಂಜಾಗ್ರತಾ ಕ್ರಮ, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಿದರೂ ಯಾಕೆ ಏನೋ ಜನ ಮಾತ್ರ ಕರೋನಾದ ಭಯವಿಲ್ಲದೆ ಓಡಾಡಿದರು. ಆದರೀಗ ಕರೋನಾ ಮಾತ್ರ ತನ್ನ ಕಬಂಧ ಬಾಹು ಚಾಚಿಕೊಳ್ಳುತ್ತಿದೆ. ಎಲ್ಲೋ ಇದ್ದ ಕರೋನಾ ವೈರಸ್ ನಮ್ಮ ಇದೀಗ ಸುತ್ತವೇ ಸುತ್ತಿಕೊಂಡಿದೆ. ಎಚ್ಚರ ತಪ್ಪಿದರೆ ಕರೋನಾ ವೈರಸ್ ದೇಹದೊಳಗೆ ಪ್ರವೇಶ ಮಾಡಿಯೇ ಬಿಡುತ್ತೆ. ಇಷ್ಟು ದಿನ ಟ್ರಾವೆಲ್ ಹಿಸ್ಟರಿ, ಸೋಂಕಿತನ ಸಂಪರ್ಕದಿಂದ ಸೋಂಕು ಕಂಡುಬರುವ ಪ್ರಕರಣಗಳು ದಾಖಲಾಗುತ್ತಿದ್ದವು. ಆದರೀಗ ಯಾವುದೇ ಟ್ರಾವೆಲ್ ಹಿಸ್ಟರಿ ಇಲ್ಲ, ಸೋಂಕಿತನ ಸಂಪರ್ಕವಿಲ್ಲದಂತವರಲ್ಲೂ ಕರೋನಾ ಪಾಸಿಟಿವ್ ದೃಢವಾಗುತ್ತಿದೆ. ಇದನ್ನು ನೋಡಿದರೆ ಕರೋನಾ ವೈರಸ್ ರಾಜ್ಯದಲ್ಲಿ ಸಮುದಾಯಕ್ಕೂ ಹಬ್ಬಿದೆ ಎನ್ನುವ ಮಾತುಗಳು ಸಹಜವಾಗಿ ಕೇಳಿಬರುತ್ತಿದೆ. ಇದರ ಮಧ್ಯೆ ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿದೆ. ಶಿಕ್ಷಣ ಇಲಾಖೆ ಕಟ್ಟುನಿಟ್ಟಿನ ಸುರಕ್ಷಿತ ಕ್ರಮ ಕೈಗೊಂಡಿದೆ. ವಿದ್ಯಾರ್ಥಿಗಳು ಕೂಡಾ ಸುರಕ್ಷಿತ ಕ್ರಮದೊಂದಿಗೆ ಪರೀಕ್ಷೆ ಬರೆಯುತ್ತಿದ್ದಾರೆ. ಆದರೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು, ಕೊಠಡಿ ಮೇಲ್ವಿಚಾರಕಿಗೂ ಕರೋನಾ ವಕ್ಕರಿಸಿದೆ. ಕಂಟೈನ್ಮೆಂಟ್ ವಲಯದಿಂದ ಬಂದಿರುವ ವಿದ್ಯಾರ್ಥಿಗಳಲ್ಲಿ ಕರೋನಾ ಕಂಡು ಬಂದಿದ್ದರೆ, ಪರೀಕ್ಷೆ ಬರೆಯಲು ಹೋಗುವ ಸಂದರ್ಭದಲ್ಲಿ ಕರೋನಾ ಸೋಂಕು ಅಂಟದಿರುವುದು ಒಂದಿಷ್ಟು ಆತಂಕ ದೂರಮಾಡಿದೆ. ರಾಜ್ಯದಲ್ಲಿ ಶರವೇಗದಲ್ಲಿ ಹೆಚ್ಚುತ್ತಿರುವ ಕರೋನಾ ಮಹಾಮಾರಿ ತಡೆಯಲು ರಾಜ್ಯ ಸರಕಾರ ಕಠಿಣ ನಿರ್ಧಾರ ತೆಗೆದುಕೊಳ್ಳಲು ಮುಂದಾಗಿದೆ.

ಇನ್ನು ಮುಂದೆ ನಾಲ್ಕು ರವಿವಾರ ಸಂಪೂರ್ಣ ಲಾಕ್ ಡೌನ್ ಜತೆಗೆ ರಾತ್ರಿ 8ರಿಂದ ಬೆಳಗ್ಗೆ 5ವರೆಗೆ ಕರ್ಫ್ಯೂ ಜಾರಿ ನಿರ್ಧಾರ. ಸರಕಾರ ಎಷ್ಟೇ ಕಠಿಣ ನಿರ್ಧಾರ ತೆಗೆದುಕೊಂಡಿದ್ದರೂ ಕರೋನಾ ಕಟ್ಟಿಹಾಕಲು ಜನತೆ ಕಟ್ಟುನಿಟ್ಟಿನ ಸುರಕ್ಷಿತ ನಿಯಮ ಪಾಲನೆ ಮೇಲೆ ನಿಂತಿದೆ. ಜನತೆ ಇದೀಗ ಆತ್ಮಾವಲೋಕನ ಮಾಡಿಕೊಳ್ಳುವ ಸಮಯ, ಕರೋನಾ ತಡೆಗೆ ಇರುವ ನಮ್ಮ ಜವಾಬ್ದಾರಿ ಹೆಚ್ಚಿದೆ. ಅಗತ್ಯವಿದ್ದರೆ ಮಾತ್ರ ಮನೆಯಿಂದ ಹೊರಗಡೆ ಬರಬೇಕು. ಜತೆಗೆ ಅನಗತ್ಯ ಪ್ರಯಾಣಕ್ಕೆ ನಿರ್ಬಂಧ ಹಾಕಿಕೊಳ್ಳಬೇಕು. ಗುಂಪು ಗುಂಪಾಗಿ ಜತೆಗೂಡುವುದಕ್ಕೆ ನಿರ್ಬಂಧ ಹಾಕಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಮಾಸ್ಕ್, ಹ್ಯಾಂಡ್ ಗ್ಲೋಸ್ ಸ್ಯಾನಿಟೈಸರ್ ಬಳಕೆಯನ್ನು ನಮ್ಮ ಬದುಕಿನ ಭಾಗವೆಂದು ಪರಿಗಣಿಸಿ, ಇಲ್ಲವಾದರೆ ಕರೋನಾ ವೈರಸ್ ದೇಹದೊಳಗೆ ಪ್ರವೇಶಿಸುವುದು ಖಚಿತ. ಲಾಕ್ ಡೌನ್, ಸೀಲ್ ಡೌನ್‌ನಂಥ ಕಠಿಣ ಕ್ರಮದ ಮಧ್ಯೆಯೂ ಕರೋನಾ ವೈರಸ್ ಮಾತ್ರ ತನ್ನ ವಿಶ್ವ ರೂಪ ತೋರಿಸುತ್ತಿದೆ. ನಮ್ಮ ವೈಯಕ್ತಿಕ ಆರೋಗ್ಯ, ರಕ್ಷಣೆ ಈಗ ಮುಖ್ಯವಾಗಿದೆ. ಭವಿಷ್ಯದ ಬಹುದೊಡ್ಡ ಸವಾಲು ನಮ್ಮ ಮುಂದಿದೆ. ಜುಲೈ ತಿಂಗಳಲ್ಲಿ ಮತ್ತೆ ಕರೋನಾ ಸಂಖ್ಯೆ, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳಿವೆ. ಶವ ಹೂಳುವ ಜಾಗಕ್ಕೂ ಸಮಸ್ಯೆ ಉಂಟಾಗಲಿದೆ. ಕರೋನಾ ಹೆಸರು ಕೇಳಿದರೆ ಭಯವಾಗುತ್ತಿದೆ. ಹಾಗಾಗಿ ಕರೋನಾ ಅಂಟಿಸಿಕೊಂಡವರ ಪಾಡು ಅವರಿಗೆ ಗೊತ್ತು. ಸೋಂಕಿತರ ನೋಡುವ ದೃಷ್ಟಿಕೋನವೇ ಬೇರೆಯಿದೆ.

ಭಟ್ಟರ್ ಸ್ಕಾಚ್

● ಸಾರಕ್ಕಿ ವಿನೋದ, ಪೀಣ್ಯ

ಇನ್ನು ಮುಂದೆ ವಾಟ್ಸಪ್‌ನಲ್ಲಿ ಹಣ ಕಳಿಸಬಹುದಂತೆ, ನಿಜಾನಾ?

- ಕ್ಷಣ ಕ್ಷಣಕ್ಕೆ ಅವೆಷ್ಟೋ ಕೋಟಿ ಜನ ಪ್ರೀತಿಯನ್ನೇ ಕಳಿಸುವಾಗ, ಹಣ ಯಾವ ಲೆಕ್ಕ ?

● ಮೂರ್ತಿ, ಮಾವಳ್ಳಿ

ಪ್ರೇಮಿಗಳು ಒಳ್ಳೆಯವರಂತೆ ಹೌದಾ ?

- ಅವರ ತಂದೆ-ತಾಯಿಗಳಿಗೆ ಮಾತ್ರ ಅಲ್ಲ !

● ನರಸಿಂಹ ಜೋಶಿ, ರಾಯಚೂರು

'ನಡುವೆ ಅಂತರವಿರಲಿ' ಎಂದು ಯಾಕೆ ಬರೆದಿರುತ್ತಾರೆ ?

- ನಡು ಎಂದು ಬರೆದಿದ್ದೇ ತಪ್ಪಾಯ್ತು ನೋಡು !

● ಶ್ರೀಧರ ಕೆಂಬಾವಿ, ಚಿತ್ರದುರ್ಗ

ವಯಸ್ಸಾದಂತೆ ಆಧ್ಯಾತ್ಮದ ಕಡೆಗೆ ಮನಸ್ಸು ಒಲಿಯಲು ಕಾರಣವೇನು ?

- ಗುರು, ಹೀಗೆಲ್ಲ ಹೇಳಿ ದೇವೇಗೌಡರಿಗೆ ಮುಜುಗರ ತಂದಿಡಬೇಡ !

● ಸೌಮ್ಯ ಹೆಗಡೆ, ಹೊನ್ನಾವರ

ನನ್ನ ಹೃದಯವನ್ನು ಬಾಡಿಗೆಗೆ ಕೊಡಬೇಕೆಂದಿರುವೆ, ನಿಮ್ಮ ಅಭಿಪ್ರಾಯ ?

- ವಾಸ್ತು ನೋಡಿ ಹೇಳಲಾ ?

● ಜ್ಯೋತಿ ವರ್ತೂರು, ಕೊಡಿಗೇಹಳ್ಳಿ

ಬರೆದರೆ ಹೀಗ್ ಬರೀಬೇಕು, ಆ ಥರಾ ಬರೆಯೋಣ ಅಂತಿದೀನಿ, ಏನಂತೀರಿ ?

- ಇದನ್ನೇ ಆ ಮೊಯಿಲಿ ಬರೆದರೆ 'ಹ್ಯಾಗ್ಯಾಗೊ ಬರೆಯಬೇಕು' ಅಂತ ಭಾವಿಸಿದ್ದಾರಂತೆ !

● ರವಿ ಮತ್ತೂರು, ಮೈಸೂರು

ಹೆಂಡತಿಯೇ ಸಂಸಾರದ ಕಣ್ಣು ಅಂತಾರಲ್ಲ, ಯಾಕೆ ?

- ಅದಕ್ಕಾಗಿಯೇ ಗಂಡನ ಮೇಲೆ ಸದಾ ಕಣ್ಣಿಟ್ಟಿರೋದು !

● ಶ್ರೀನಿವಾಸ ಬೈಕಾಡಿ, ರಾಜಾಜಿನಗರ

ಎಲ್ಲಾ ಪಕ್ಷಗಳ ನಾಯಕರೂ ನಿಮ್ಮ ಜತೆ ಒಳ್ಳೆಯ ಸ್ನೇಹ ಇಟ್ಟುಕೊಂಡಿದ್ದಾರಂತೆ ಹೌದಾ ?

- ಅದಕ್ಕಾಗಿಯೇ ಎಲ್ಲರ ಬಗ್ಗೆಯೂ ಉಗಿದು ಬರೆಯೋದು !

● ಕೆ.ಎಚ್.ನಳಿನಿ, ಮಂಡ್ಯ

ನನಗೆ ಜಯವೀರ ಗೌಡ ಜತೆಗೆ ಕ್ರಶ್ ಆಗಿದೆ, ಏನು ಮಾಡಲಿ ?

- ಆತನಿಗೆ ಎಲ್ಲರೂ 'ಬೇಟೆ' ಯಂತೆ ಕಾಣುತ್ತಾರೆ, ಹುಷಾರು !

● ವಿರೂಪಾಕ್ಷ ಕೆ, ಯಲಹಂಕ

ಆಕೆ ನನ್ನ ನೋಡುತ್ತಾ ಚಾಕಲೇಟ್ ತಿನ್ನುತ್ತಾಳಲ್ಲ ?

- ಸರಿಯಾಗಿ ನೋಡು, ಆಕೆ ತಿನ್ನುತ್ತಿರೋದು ಹುಣಸೆಕಾಯಿ !

ಭಾಷೆಯನ್ನು ಸೋಲಿಸಿದರೆ ಸಾಯುತ್ತದೆ, ಗೆಲ್ಲಿಸಿದರೆ ಬೆಳೆಯುತ್ತದೆ

ಅಭಿವ್ಯಕ್ತಿ

ಅರುಣ್ ಕೋಟೆ
Kote.arun2@gmail.com

ಇತ್ತೀಚೆಗಂತೂ ಈ ಇಂಟರ್ನೆಟ್ಟಿನ ವಿಡಿಯೋಗಳನ್ನ ನೋಡಿ ಮನೆಯಲ್ಲಿ ಅಡುಗೆ ಮಾಡುವ ಚಟುವಟಿಕೆ ಹೆಚ್ಚಾಗಿದೆ. ವಿವಿಧ ಸಂಸ್ಕೃತಿ ಮತ್ತು ಪ್ರದೇಶಗಳ ವೈವಿಧ್ಯಮಯ ಖಾದ್ಯಗಳನ್ನು ರುಚಿಯಾಗಿ ಮಾಡುವ ವಿಧಾನವನ್ನು ಕಲಿಯಬೇಕು, ಅಡುಗೆ ಮಾಡಿ ಮನೆಯವರಿಗೆ ಬಡಿಸಬೇಕು ಅನ್ನುವ ಆಸೆ ನಮ್ಮ ಜನಗಳಲ್ಲಿ ಲಿಂಗ ತಾರತಮ್ಯವಿಲ್ಲದೆ ಹುಟ್ಟಿಕೊಂಡದ್ದು ಒಳ್ಳೆಯ ಬೆಳವಣಿಗೆ. ಅದೆಷ್ಟೋ ಯುವತಿಯರು ಅಡುಗೆ ಮನೆಯಲ್ಲಿ ಎರಡು ನಿಮಿಷದ ನೂಡಲ್ಸ್ ಅನ್ನು ಮೀರಿದ ಗಂಟೆಗಟ್ಟಲೆ ಸಮಯವನ್ನು ಶ್ರಮವನ್ನು ಬೇಡುವ ಖಾದ್ಯಗಳ ತಯಾರಿಗೆ ಕಾಲೂರಿ ನಿಂತದ್ದೇ ಭಾರೀ ಬದಲಾವಣೆ.

ಕೆಲವೊಂದು ಖಾದ್ಯಗಳನ್ನು ತಿಪ್ಪರಲಾಗ ಹಾಕಿದರೂ ಮನೆಯಲ್ಲಿ ಮಾಡಲು ಸಾಧ್ಯವಿಲ್ಲ ಎನ್ನುವ ಮೌಢ್ಯ ಇಂಟರ್ನೆಟ್ ವಿಡಿಯೋ ಶೇರಿಂಗ್ ಹಾವಳಿಯಲ್ಲಿ ಬಹುತೇಕ ಧೂಳಿಪಟವಾಗಿದೆ. ಇಂಟರ್ನೆಟ್ ಎಲ್ಲವನ್ನು ಬಯಲು ಮಾಡಿದೆ. ಲಾಕ್ ಡೌನ್ ಹೊಸತರಲ್ಲಿ ನಮ್ಮ ಜನಗಳು ಚುರುಕಾದದ್ದು ಅಡುಗೆ ಮನೆಯಲ್ಲೇ. ಯಾವಾಗ ಎರಡನೇ ತಿಂಗಳ ಸಂಬಳಗಳು ಕೈಕೊಟ್ಟವೋ ತೆಪ್ಪಗೆ ಪಡಸಾಲೆಯಲ್ಲಿ ಕೂತು ಸರಳ ಆಹಾರ, ಆರೋಗ್ಯ, ವ್ಯಾಯಾಮದ ಕುರಿತ ಚಿಂತನೆಯನ್ನು ಮಾಡತೊಡಗಿದರು.

ಗಂಡಸರಂತೂ ಬಾಣಸಿಗತನ ನಮ್ಮ ಮೂಲ ಕಸುಬು ಮತ್ತು ಜವಾಬ್ದಾರಿ ಎನ್ನುವ ಹಾಗೆ ತಲೆಕೆಡಿಸಿಕೊಂಡು ಅಡುಗೆ ಮನೆಯನ್ನು ನುಗ್ಗಿ ಪಾಂಡಿತ್ಯ ಪ್ರದರ್ಶನ ಹಾಗೂ ಪ್ರಯೋಗಗಳನ್ನುಮಾಡುತ್ತಾ ಸಾಕ್ಷಾತ್ ನಳ ಮಹಾರಾಜನಂತೆ ಆಡಿದ್ದು ಗಾಳಿಸುದ್ದಿಯಾದರೂ ಸತ್ಯವೆನ್ನಬಹುದು. ಆ ವಿಚಾರ ಬೇರೆ.

ಹೇಳಬೇಕು ಅಂದುಕೊಂಡಿದ್ದು ಇದು. ಅಡುಗೆ ಮನೆಗೂ ಕನ್ನಡಕ್ಕೂ ಬಹಳ ನಂಟಿದೆ ನೋಡಿ. ಅಲ್ಲಿ ವಿಪರೀತ ಭಾಷಾ ಸಂಪತ್ತಿದೆ. ಕನ್ನಡದ ವೈವಿಧ್ಯಮಯವಾದ ನುಡಿಗಟ್ಟುಗಳು ನಮ್ಮ ಅಡುಗೆ ಮನೆಯಲ್ಲಿವೆ. ಆದರೆ ಇಂದು ನಾವು ಅಲ್ಲಿ ಎಷ್ಟು ಕನ್ನಡ ಪದಗಳನ್ನು ಜೀವಂತವಾಗಿಟ್ಟಿದ್ದೇವೆ? ನಮ್ಮ ಅಜ್ಜಿಯ ಕಾಲಕ್ಕೆ ಹೇಗಿತ್ತು? ನಮ್ಮ ಅಮ್ಮಂದಿರ ಕಾಲಕ್ಕೆ ಎಷ್ಟರ ಮಟ್ಟಿಗೆ ಕನ್ನಡ ಪದಗಳ ಬಳಕೆಯಾಗುತ್ತಿದೆ? ಈಗ ಅಡುಗೆ ಮನೆಯ ಕನ್ನಡ ಹೇಗಿದೆ. (ಇದನ್ನು ಹೆಂಡತಿಯರ ಕಾಲವೆನ್ನಬಹುದೇ?) ಈ ವಿಭಿನ್ನ ಖಾದ್ಯಗಳನ್ನು ಕಲಿಯುವ ಹುರುಪಿನಲ್ಲಿ ಅದೆಷ್ಟು ಕನ್ನಡದ ಪದಗಳನ್ನು ಸಾಯಿಸಿದೆವು ಎಂಬ ಅರಿವು ನಮ್ಮ ಜನಗಳಲಿದೆ? ಸ್ವಲ್ಪ ನೋಡೋಣ.

ಉರಿಯಲು ಬೇಯಿಸಲು ಒಲೆ, ಆಹಾರ ಚಹ ಕಾಫಿ ಬೆಚ್ಚಗಿಡಲು ಕೋಡೊಲೆ, ಒಲೆಗೆ ಹೊಂದಿಕೊಂಡ ಹಿತ್ತಾಳೆ ಎಡ್ಲೆಯಲ್ಲಿ ಅದೇ ಶಾಖದಿಂದ ಆಗುತ್ತಿದ್ದ ಬಿಸಿಯಾದ ನೀರು. ನೀರು ಅಥವಾ ಇನ್ನಿತರೆ ದ್ರವಗಳನ್ನು ತೋಡಿಕೊಳ್ಳಲು, ಬಳಸಲು ಚೊಂಬು, ತಾಲಿ, ಗಿಂಡಿ. ಪಾತ್ರೆಗಳನ್ನು ಎತ್ತಲು ಇಕ್ಕಳ. ಮೊಸರು ಕಡೆಯಲು ಕಡೆಗೋಲು, ಬೆಂದ ಪದಾರ್ಥವನ್ನು ಮಸೆಯಲು ಮಸ ಗುಂಡು ಅಥವಾ



ಮಸ ಕಟ್ಟಿಗೆ.

ಸಾರು, ಹಾಲು, ಮೊಸರು ಇನ್ನಿತರೆ ಪದಾರ್ಥಗಳನ್ನು ಪಾತ್ರೆಗಳಲ್ಲಿ ತುಂಬಿ ಬೆಕ್ಕು ಹೆಗ್ಗಣ ಜಿರಳೆಯಿಂದ ಕಾಪಾಡಲು ಮೂಲೆಯಲ್ಲಿ ನೇತುಹಾಕವ ನೆಲುವು. ಅನ್ನ ಬಸಿಯುವ ಇಬ್ಬಲು, ಬಿಸಿ ಕಡಾಯ, ಪಾತ್ರೆಗಳನ್ನು ಎತ್ತಿ ಇಡುವಾಗ ತಳದಲ್ಲಿ ಹಾಕುತ್ತಿದ್ದ ಇಳಿಕೆ. ಬುತ್ತಿ ತುಂಬುವ ಬುತ್ತಿಯಡಿಗೆ. ಇನ್ನು ಮಣೆ, ಇಳಿಗೆ ಮಣೆ, ತುರಿಯೋ ಮಣೆ, ರುಬ್ಬಲು ರುಬ್ಬಕಲ್ಲು, ಕುಟ್ಟಲು ಕುಟ್ಟಣಿ.

ಚುಚ್ಚುಗ, ಚಮಚ, ಸೌಟು,ಅನ್ನದ ಕೈ, ಮುದ್ದೆ ಕೋಲು, ಕರಿಯುವುದು, ಬೇಯಿಸುವುದು, ಕೂಡಿಸುವುದು, ಹೆಚ್ಚುವುದು, ಮಸೆಯುವುದು, ಮರಳಿಸುವುದು, ಮಾಗೊಯ್ಯುವುದು, ಬಸಿಯುವುದು, ಸೋಸುವುದು ಇತ್ಯಾದಿ ಪದಗಳಲ್ಲಿ ಎಷ್ಟು ಬಳಕೆಯಲ್ಲಿವೆ?

ನಾನಿಲ್ಲಿ ನನಗೆ ಗೊತ್ತಿರುವ ಕರ್ನಾಟಕದ ಒಂದಷ್ಟು ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಪದಗಳನ್ನು ಮಾತ್ರ ಹೇಳಿದ್ದೇನೆ. ಕರಾವಳಿ ಮಲೆನಾಡು ಉತ್ತರ ಕರ್ನಾಟಕದಲ್ಲಿ ಇನ್ನಷ್ಟು ವೈವಿಧ್ಯಮಯವಾದ ಅಡುಗೆ ಮನೆಯ ಕನ್ನಡವಿದ್ದೇ ಇರುತ್ತದೆ. ಈಗ ಅಡುಗೆ ಮನೆಯಲ್ಲಿ ಬಳಸುವ ಭಾಷೆ ಹೇಗಿದೆ ನಿಮಗೆ ಗೊತ್ತಲ್ಲ!

ಅಡುಗೆ ಮನೆಯೇ ಮೊದಲು ಕಿಚನ್ ಆಗಿ ಬಿಡುತ್ತದೆ. ಸ್ಟವ್, ಗ್ಯಾಸ್, ಲೈಟರ್, ಫ್ರೈ, ಡೀಪ್ ಫ್ರೈ, ಗೋಲ್ಡನ್ ಫ್ರೈ, ಮಿಕ್ಸ್, ಸ್ಟ್ಯಾಂಡ್, ಹ್ಯಾಂಡಲ್, ಗ್ಲಾಸ್, ಸ್ಪೂನ್, ಚಾಪ್, ಲೋ ಫ್ಲೇಮ್, ಹೈ ಫ್ಲೇಮ್, ಆಯಿಲ್, ಸಾಲ್ಟ್, ಪೆಪ್ಪರ್, ಶುಗರ್, ವಾಟರ್, ರೈಸ್, ರಿನ್ಸ್, ವೈಪ್ ಇತ್ಯಾದಿ. ಎಷ್ಟು ಕನ್ನಡ ಪದಗಳು ಮರೆಯಾದವು, ಎಲ್ಲಿಗೋದವು ಗಮನಿಸಿದ್ದೀರಾ?

ಕಾಲ ಬದಲಾಗಿದೆ. ಅಡುಗೆ ಮನೆಗಳು ಆಧುನಿಕವಾಗಿವೆ. ಒಂದಷ್ಟು ಆಂಗ್ಲ ಪದಗಳ ಬಳಕೆ ತಪ್ಪಲ್ಲ. ಆದರೆ ಎಲ್ಲವನ್ನು ಇಂಗ್ಲೀಷಿಗೆ ಬಿಟ್ಟು ಕೊಟ್ಟು ಕನ್ನಡವನ್ನು ವಿಭಕ್ತಿ ಪ್ರತ್ಯೆಯಕ್ಕೆ ಮಾತ್ರ ಸೀಮಿತಗೊಳಿಸಿದರೆ ಹೇಗೆ?

ಅನೇಕ ಆಧುನಿಕ ವಸ್ತುಗಳಿಗೆ ಕನ್ನಡದಲ್ಲಿನ್ನು ಹೆಸರಿಲ್ಲ. ನಾಮಕರಣಕ್ಕೆ ಸಾಹಿತಿಯನ್ನೋ ಪಂಡಿತನನ್ನೋ ಮನೆಗೆ ಕರೆಸಬೇಕಿಲ್ಲ. ನಾವೇ ಒಂದು ಪದವನ್ನು ಕನ್ನಡದಲ್ಲಿ ಬಳಕೆಗೆ ತಂದು ಬಿಡಬೇಕು. ಆಡುಮಾತಿಲ್ಲದೆ ದಿನನಿತ್ಯ ಬಳಸದ ಯಾವ ಭಾಷೆ ಉಳಿದೀತು?

ಆದರೆ ನಾವು ಗಟ್ಟಿ ಕನ್ನಡ ಪದಗಳನ್ನೇ ಹೊಸಕಿ ಹಾಕಲು ಮುಂದಾಗಿದ್ದೇವೆ. ಉದಾಹರಣೆಗೆ ನೋಡಿ ಶುಂಠಿ ಬೆಳ್ಳುಳ್ಳಿ ಚಟ್ನಿಯನ್ನು ಜಿಂಜರ್ ಗಾರ್ಲಿಕ್ ಪೇಸ್ಟ್ ಅಂತಿವಿ. ಜಜ್ಜುವುದು, ಕಿವುಚುವುದು, ಮಸೆಯುವುದನ್ನು ಒಂದೇ ಇಂಗ್ಲಿಷ್ ಪದದಲ್ಲಿ ಸ್ಮಾಶ್ ಮಾಡಿಬಿಡುತ್ತೇವೆ. ಅಲ್ಲಿಗೆ ವಿವಿಧ ಸಂದರ್ಭಗಳಲ್ಲಿ ಬಳಸುವ ಆ ಮೂರು ಪದಗಳು ನೆಗೆದುಬಿದ್ದವು.

ಎಲ್ಲಾ ಭಾಷೆಯಲ್ಲೂ ಪದಪರಂಪರೆ ಅಂದರೆ Wordlore ಎಂಬುದು ಅತ್ಯಂತ ಕುತೂಹಲಕಾರಿ ವಿಷಯವಾಗಿದೆ. ನಾವು ಪದಪರಂಪರೆಯ ಶೋಧನೆಗೆ ಬಿದ್ದರೆ ದಂಗಾಗುವ ಅನೇಕ ಸಂಗತಿಗಳು ನಮಗೆ ಗೋಚರವಾಗುತ್ತವೆ. ಕೆಲವೊಮ್ಮೆ ನಾವು ಬಳಸುತ್ತಿರುವ ಸಾಮಾನ್ಯ ಕನ್ನಡ ಪದಗಳೇ ನೂರಾರು ವರುಷಗಳ ಹಿಂದೆ ಯಾವುದೋ ಪರ್ಷಿಯ, ಯೂರೋಪ್‌ನಿಂದ ಬಂದದ್ದಾಗಿರುತ್ತದೆ. ಅಥವಾ ಎಲ್ಲೋ ಬಳಸುವ ಪದಗಳು ನಮ್ಮವಾಗಿರುತ್ತವೆ.

ಒಂದು ಭಾಷೆ ಬೆಳೆಯುವುದೇ ಅದಕ್ಕೆ ಹೊಂದಿಕೊಳ್ಳುವ ಮತ್ತು ಬೆರೆಯುವ ಗುಣವಿದ್ದಾಗ. ಎಲ್ಲೆಲ್ಲಿಂದಲೋ ಪದಗಳನ್ನು ಎತ್ತಿಕೊಂಡು ಅರಗಿಸಿಕೊಂಡು ತನ್ನ ನೆಲದ ಭಾಷೆಯ ಧ್ವನಿಯಲ್ಲಿ ಹೊಮ್ಮಿ ವಿಸ್ತಾರ ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ಭಾಷೆಯ ಜಾಣತನ. ನಮ್ಮ ನೆಲದ ಭಾಷೆಯನ್ನು ಆಡುವ ನಮಗೆ ಆತ್ಮವಿಶ್ವಾಸವಿರಬೇಕು. ಸ್ವಾಭಿಮಾನವಿರಬೇಕು. ಮತ್ತೊಂದು ಭಾಷೆಯ ಪದವನ್ನು ಬಳಸುವ ಮುನ್ನ ಸ್ವಲ್ಪ ಆಲೋಚನೆ ಮಾಡಬೇಕು. ಇರುವ ಭಾಷೆಯನ್ನು ಕೊಂದು ನಾವು ಯಾವ ಸಂಸ್ಕೃತಿ ಭಾಷೆಯನ್ನು ಬೆಳೆಸಲೂ ಸಾಧ್ಯವಿಲ್ಲ.

ತಲೆಗೆ ಇಂಬು ಕೊಟ್ಟದ್ದು ತಲೆದಿಂಬು ಆಯಿತು. ಪರಶುರಾಮ ನದಿಯಲ್ಲಿ ಮಿಂದು ಕ್ಷತ್ರಿಯ ಕುಲದ ಹತ್ಯಾಕಾಂಡದ ಪಾಪ ತೀರಿಸಿಕೊಂಡದ್ದರಿಂದ ತೀರಿತು ಹಳ್ಳಿಯೇ ಈಗ ತೀರ್ಥಹಳ್ಳಿಯಾಗಿರುವುದು ಎಂಬುದು ಬನ್ನಂಜೆ ಗೋವಿಂದಾಚಾರ್ಯರ ಮಾತು. ಕನ್ನಡದ Etymology ಕುರಿತಾಗಿ ಪಾವೆಂ ಆಚಾರ್ಯರು ಆಳವಾದ ಸಂಶೋಧನೆ ಮಾಡಿ ಪದಗಳ ವ್ಯುತ್ಪತ್ತಿಯ ರೋಮಾಂಚಕಾರಿ ನೂರಾರು ಕಥೆಗಳನ್ನೇ ಪದಾರ್ಥ ಚಿಂತಾಮಣಿಯೆಂಬ ಪುಸ್ತಕದ ರೂಪದಲ್ಲಿ ಕನ್ನಡಿಗರಿಗೆ ಬರೆದುಕೊಟ್ಟಿದ್ದಾರೆ.

ಹೀಗೆ ಭಾಷೆ, ಕಾಲಕಾಲಕ್ಕೂ ಗೆಲ್ಲುತ್ತಾ ಮುಂದೆ ಸಾಗಬೇಕು. ಸ್ವಾಭಿಮಾನವನ್ನು ಗಟ್ಟಿತನವನ್ನು ಉಳಿಸಿಕೊಂಡು ಹೊಂದಿಕೊಳ್ಳಬೇಕು. ಕಾಗೆಗೆ ತನ್ನ ಕಪ್ಪಿನ ಕೀಳಿರಿಮೆಯೂ ಇಲ್ಲ, ನವಿಲಿಗೆ ತನ್ನ ನೃತ್ಯ ಮತ್ತು ಗರಿಯ ಮೇಲಿರಿಮೆಯೂ ಇಲ್ಲ. ಅದೇನಿದ್ದರೂ ಮನುಷ್ಯನ ಕಚಡತನ ಮಾತ್ರ. ನಾವೆಲ್ಲಾ ಎಷ್ಟರ ಮಟ್ಟಿಗೆ ಕನ್ನಡವನ್ನು ಮುಂದಿನ ಪೀಳಿಗೆಗೆ ಉಳಿಸಿಕೊಡುತ್ತಿದ್ದೇವೆ ಎಂಬುದನ್ನು ಪ್ರಶ್ನೆ ಮಾಡಿಕೊಳ್ಳಲೇ ಬೇಕು.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ನೂರು ವರುಷದ ಬ್ರಿಟಿಷರ ಕಾಲದ ದೊಡ್ಡ ಮಿಂಟೋ ಕಣ್ಣಿನ ಆಸ್ಪತ್ರೆಯಿದೆ. ಅದೇ ರಸ್ತೆಯ ಬದಿಯಲ್ಲಿ ಆಂಜನೇಯ ದೇವಾಲಯವಿದೆ. ನಮ್ಮ ಜನ ಆ ಆಂಜನೇಯನನ್ನು ಮಿಂಟೋ ಆಂಜನೇಯ ಎಂದು ಕರೆಯುತ್ತಾರೆ. ದೇವಾಲಯದ ಆಡಳಿತವೇ ಅಲ್ಲೊಂದು ಆ ಹೆಸರಿನ ದೊಡ್ಡ ನಾಮಫಲಕವನ್ನು ನೇತು ಹಾಕಿದೆ. ಇದು ಕರ್ನಾಟಕದ ರಾಜಧಾನಿಯ ಹೃದಯಭಾಗದ ಹುಚ್ಚಾಟ. ಕನ್ನಡ ಸಂಸ್ಕೃತಿಯ ಪರದಾಟ. ಇನ್ನು ಪೀಟರ್ ಗಣಪತಿ, ಥಾಮಸ್ ಶಿವ, ಮೈಕೆಲ್ ರಾಮ ಇವೆಲ್ಲಾದರು ಇದ್ದರೆ ಆಶ್ಚರ್ಯವಿಲ್ಲ. ಮೂರ್ಖತನದಿಂದ ಆದ ಎಡವಟ್ಟುಗಳಿಗೆ ಸಾಮರಸ್ಯದ ನಾಮಕರಣವನ್ನು ಮಾಡುವ ನಾಯಕರುಗಳಿಗೇನು ನಮ್ಮಲ್ಲಿ ಕಮ್ಮಿಯಿಲ್ಲ.

ಹೀಗೆ ಒಂದು ಭಾಷೆ ಜನರ ಅಜ್ಞಾನ ಮತ್ತು ಕೀಳಿರಿಮೆಯಿಂದ ಸೋತು ಮುಂದುವರಿದರೆ ಅದು ಬೆಳೆಯುತ್ತಿರುವುದಿಲ್ಲ, ಬದಲಾಗಿ ಸಾಯುತ್ತಿದೆ ಎನ್ನಬೇಕಾಗುವುದು. ನಾವು ಕಥೆ, ಕಾದಂಬರಿ, ಕಾವ್ಯ ಓದುವುದು ಆಮೇಲೆ. ಮೊದಲು ಅಡುಗೆ ಮನೆ, ಅಂಗಳ, ಬಚ್ಚಲು, ಶೌಚಾಲಯ, ಪಡಸಾಲೆ, ದೇವರು ಮನೆ, ಕೋಣೆ, ಮಾಳಿಗೆ ಒಟ್ಟಾರೆ ಮನೆಯ ಕನ್ನಡದ ಪದಗಳನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು. ಮಾತ್ರ ಭಾಷೆ ಬಡವಾದರೆ ಅನಾಥರಾಗುವುದು ನಾವೇ ಅಲ್ಲವೇ?